## ತಬಲ ಮಾದರಿ ವಿನ್ಯಾಸ, ನವೀಕರಣ ಕಾರ್ಯ ಪೂರ್ಣ

# ಸೇಂಟ್ ಜಾನ್ಸ್ ಸಭಾಂಗಣಕ್ಕೆ ಹೊಸರೂಪ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರಿನ ಕೋರಮಂಗಲದಲ್ಲಿರುವ ಸೇಂಟ್ ಜಾನ್ಸ್ ಆಡಿಟೋರಿಯಂ ಇದೀಗ ಹೊಸ ರೂಪ ಪಡೆದುಕೊಂಡಿದ್ದು ತಬಲಾ ಮಾದರಿಯಲ್ಲಿ ನವೀಕರಣಗೊಂಡಿದೆ. ಸೇಂಟ್ ಜಾನ್ಸ್ ರಾಷ್ಟ್ರೀಯ ಆರೋಗ್ಯ ವಿಜ್ಞಾನಗಳ ಸಂಸ್ಥೆಯು ತನ್ನ ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಈ ಸಭಾಂಗಣದ ನವೀಕರಣ ಕಾರ್ಯವನ್ನು ಕೈಗೆತ್ತಿಕೊಂಡಿತ್ತು.

ಮಲ್ಲೇಶ್ವರಂನಲ್ಲಿ ಚೌಡಯ್ಯನವರ ಸ್ಮಾರಕ ಭವನವನ್ನು ಪಿಟೀಲಿನ ಮಾದರಿಯಲ್ಲಿ ನಿರ್ಮಿಸಿದಂತೆ ಈ ಸಭಾಂಗಣವನ್ನು ತಬಲಾ ಮಾದರಿಯಲ್ಲಿ ನವೀಕರಣಗೊಳಿಸಲಾಗಿದೆ. ಸಂಗೀತ ಉಪಕರಣಗಳನ್ನು ಹೋಲುವ ಮಾದರಿ ಕಟ್ಟಡಗಳ ಪೈಕಿ ಪಿಟೀಲು ಚೌಡಯ್ಯನವರ ಸ್ಮಾರಕ ಭವನ ಮೊದಲನೆಯದ್ದಾದರೆ, ತಬಲಾ ಮಾದರಿಯ ಈ ಕಟ್ಟಡ ಎರಡನೆಯದು ಎಂಬ ಖ್ಯಾತಿಗೆ ಪಾತ್ರವಾಗಿದೆ.

ಸಭಾಂಗಣದ ವಿದ್ಯುತ್, ಬೆಳಕು, ಧ್ವನಿ ವ್ಯವಸ್ಥೆ ಸರಿಯಾಗಿರಲಿಲ್ಲ. ತಬಲಾ ಮಾದರಿಯನ್ನು ಉಳಿಸಿಕೊಂಡೇ ನವೀಕರಣ ಮಾಡಬೇಕೆಂಬ ಉದ್ದೇಶದೊಂದಿಗೆ ಒಂದು ವರ್ಷದ ಹಿಂದೆ ಆರಂಭಿಸಿದ ಕಾಮಗಾರಿ ಇದೀಗ ಪೂರ್ಣಗೊಂಡು ಸುಸಜ್ಜಿತ ಸಭಾಂಗಣವಾಗಿ ಕಂಗೊಳಿಸುತ್ತಿದೆ.

ಈ ಸಭಾಂಗಣದಲ್ಲಿ ಹವಾನಿಯಂತ್ರಿತ ಸೌಕರ್ಯ ಇರಲಿಲ್ಲ. ಶೌಚಾಲಯ ವ್ಯವಸ್ಥೆಯೂ ಸೂಕ್ತವಾಗಿರಲಿಲ್ಲ. ಗ್ರೀನ್‌ರೂಂನಲ್ಲಿಯೂ ಕೊರತೆಗಳಿದ್ದವು. ಪ್ರೊಜೆಕ್ಟರ್‌ಗಳ ಕೋಣೆಯೂ ಸುಸಜ್ಜಿತವಾಗಿರಲಿಲ್ಲ. ಹೀಗಾಗಿ, ಈ ಸಭಾಂಗಣಕ್ಕೆ ಆಧುನಿಕ ಸ್ಪರ್ಶ ನೀಡಲು ಸುವರ್ಣ ಮಹೋತ್ಸವ ಒಂದು ಸುಸಂದರ್ಭ ಎಂದು ಪರಿಗಣಿಸಿದ ಸಂಸ್ಥೆಯ ಆಡಳಿತ ಮಂಡಳಿ ಕಟ್ಟಡ ನವೀಕರಣಕ್ಕೆ ಮುಂದಾಗಿತ್ತು.



ಸುಮಾರು 25 ವರ್ಷ ಹಳೆಯದಾದ ಈ ಕಟ್ಟಡದ ನವೀಕರಣ ಕೆಲಸ ಸೇಂಟ್ ಜಾನ್ಸ್ ಸಂಶೋಧನಾ ಸಂಸ್ಥೆಯ ಉಪ ಡೀನ್ ಡಾ. ಟೋನಿ ರಾಜ್ ಅವರಿಗೆ ಸವಾಲಾಗಿತ್ತು. ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವುದಷ್ಟೇ ಅಲ್ಲದೆ ಸುಮಾರು 1100 ಪ್ರೇಕ್ಷಕರಿಗೆ ಸ್ಥಳಾವಕಾಶ ಕಲ್ಪಿಸುವುದು ಬಹುದೊಡ್ಡ ಸವಾಲಾಗಿತ್ತು. ಕಟ್ಟಡ ವಿನ್ಯಾಸಕಾರ ವಿ.ವಿಶ್ವನಾಥ್ ಅವರೊಂದಿಗೆ ನಡೆದ ಹಲವು ಸುತ್ತುಗಳ ಚರ್ಚೆಯ ಬಳಿಕ ಕಟ್ಟಡದ ಮೂಲ ಅಸ್ತಿತ್ವಕ್ಕೆ ಧಕ್ಕೆಯಾಗದ ರೀತಿಯಲ್ಲಿ ನವೀಕರಣಗೊಳಿಸಬೇಕೆಂಬ ನಿರ್ಣಯಕ್ಕೆ ಬರಲಾಯಿತು ಎನ್ನುತ್ತಾರೆ.

ಕಟ್ಟಡದ ಕಂಬಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡು ಗೋಡೆಗಳನ್ನು ಮಾತ್ರ ಕೆಡವಲಾಯಿತು. ಇದರಿಂದ, ಇಡೀ ಕಟ್ಟಡವು ಶುದ್ಧ ಗಾಳಿ ಹಾಗೂ ಬೆಳಕಿಗೆ ತೆರೆದುಕೊಳ್ಳಲು ಸಾಧ್ಯವಾಯಿತು. ಮಹಡಿಯ ಭಾಗವನ್ನು ಬಳಸಿಕೊಂಡು ಸುಮಾರು 750 ಪ್ರೇಕ್ಷಕರು ಕುಳಿತುಕೊಳ್ಳುವಂತೆ ಆಸನಗಳ ವ್ಯವಸ್ಥೆ ಕಲ್ಪಿಸಲಾಗಿದ್ದು, ಉಳಿದ ಜಾಗದಲ್ಲಿ ಉಪನ್ಯಾಸಗಳಿಗಾಗಿ ಸಭಾಂಗಣಗಳನ್ನು ನಿರ್ಮಿಸಲಾಗಿದೆ ಎಂದು ವಿ. ವಿಶ್ವನಾಥ್ ತಿಳಿಸಿದರು.

### ಶಬ್ದಮುಕ್ತ ಸಭಾಂಗಣ

ಸಂಚಾರ ದಟ್ಟಣೆಯಿಂದಾಗಿ ಕೇಳಿಬರುತ್ತಿದ್ದ ಭಾರಿ ಶಬ್ದದಿಂದ ಪ್ರೇಕ್ಷಕರು ಕಿರಿಕಿರಿ ಅನುಭವಿಸುತ್ತಿದ್ದದ್ದು ಈ ಸಭಾಂಗಣದ ಬಹುದೊಡ್ಡ ಹಿನ್ನಡೆ ಎಂದೇ ಹೇಳಲಾಗುತ್ತಿತ್ತು. ಈಗ ಇಡೀ ಕಟ್ಟಡವು ಶಬ್ದಮುಕ್ತಗೊಂಡಿದೆ. ಗ್ರೀನ್‌ರೂಂನಲ್ಲಿ ಖಾಸಗಿತನಕ್ಕೆ ಆದ್ಯತೆ ನೀಡಿದೆ. ಸಭಾಂಗಣವು ಹವಾನಿಯಂತ್ರಿತವಾಗಿದೆ. ವಿನೂತನ ಮಾದರಿಯ ಬಹು ಆರಾಮವಾಗಿ ಕುಳಿತುಕೊಳ್ಳುವ ಆಸನಗಳು, ಪ್ರೊಜೆಕ್ಟರ್ ಕೋಣೆ ಎಲ್ಲವೂ ಸುಸಜ್ಜಿತವಾಗಿವೆ. ಭದ್ರತೆ ದೃಷ್ಟಿಯಿಂದ ಬೆಂಕಿ ನಂದಿಸುವ ಮತ್ತು ಅಪಾಯದ ಮುನ್ಸೂಚನೆ ತಿಳಿಯಲು ಅತ್ಯಾಧುನಿಕ ಉಪಕರಣಗಳನ್ನು ಅಳವಡಿಸಿದೆ. ವೃದ್ಧರು, ವಿಕಲಚೇತನರಿಗೆ ಅನುಕೂಲವಾಗುವಂತೆ ರ್‍ಯಾಂಪ್ ಹಾಗೂ ಲಿಫ್ಟ್‌ಗಳನ್ನು ನಿರ್ಮಿಸಲಾಗಿದೆ. ಈ ಸಭಾಂಗಣದಲ್ಲಿ ನಡೆಯುವ ಸಮಾರಂಭವನ್ನು ಏಕಕಾಲಕ್ಕೆ 5 ವಿವಿಧ ಸಭಾಂಗಣಗಳಲ್ಲಿ ಕುಳಿತು ವೀಕ್ಷಿಸುವಂತಹ ಸೌಲಭ್ಯ ಕಲ್ಪಿಸಲಾಗಿದೆ. ಹೀಗಾಗಿ, ಸುಮಾರು 3 ಸಾವಿರ ಪ್ರೇಕ್ಷಕರು ಸಮಾರಂಭವನ್ನು ವೀಕ್ಷಿಸುವಂತಾಗಿದೆ.